(34) 2

Regd No B C. 155 — 3rn — 19 2--1965

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

ಸ್ವಾತಂತ್ರ್ಯ ಪರ್ವವಾಸಗಳಿಗೆ
ಅಕ್ಷರಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow.
ಗೋಸಂರಕ್ಷಣೆ ಮಾಡಿ

ಸ್ವಾತಂತ್ರ್ಯ ಅರಮನೆ ಪಿರಿಸ್ಥೇದಾರ್ ಎಂ ಪಿ ಸಬ್ಬಂತಿಯವರು 2 ಪೈ

ಸಮಾಚಾರ ಸಂಗ್ರಹ

ಸೈಗೋದಿ— ಉತ್ತರ ಭಾಗಗಳಲ್ಲಿ ಮಂಡಿಸಿದ ಎಂಡು ಗತ್ರಮಗಳ ಮೇಲೆ ಬಾ ೬ ಬು ಮಾಡಿದ ಶೊಂಬೆಯವರ ಸೈನಿಕರು ಅಮೆ ರಿಕಾ ನಿರ್ಮಾಣಗಳನ್ನು ಉಪಯೋಗಿಸಿ ದ್ದರಿಂದ ಪೂರ್ವ ಅಫ್ಘಾನಿಸ್ತಾನದಲ್ಲಿ ಅಮೆ ರಿಕದ ವಿರುದ್ಧದ ಮನೋಭಾವ ತೀವ್ರ ವಾಗಿದೆ

★

ನವದೆಹಲಿ— ವಾಸು ಕಮ್ಯೂನಿಸ್ಟ ರಿಗೆ ಚೀನಾ ಕಡೆಯ ಮನೋಭಾವವೆಂ ದು ನನ್ನೆ ಮಂತ್ರಿ ನಂದಾರವರು ಪಾರ್ಲಿ ಮೆಂಟಿನಲ್ಲಿ ತಿಳಿಸಿದರು.

★

ನವದೆಹಲಿ — ನೇತ್ರ ಕಸ್ಮ್ರಚಿಕಿತ್ಸೆ ಗಾಗಿ ರಾಷ್ಟ್ರಪತ್ನಿ ಡಾ॥ ರಾಧಾಕೃ ಷ್ಣನ್ನರು ಮುಂದಿನ ತಿಂಗಳು ಲಂಡನ್ನಿಗೆ ಹೋಗಲಿಯವರು

★

ನವದೆಹಲಿ— ಹಿಂದೀ ವಿರುದ್ಧದ ಗ ಲಭೆಗಳು ಮತ್ತು ಭಾಷಾ ನೀತಿಯ ಬಗ್ಗೆ ಲೋಕಸಭೆಯಲ್ಲಿ ವಿರೋಧ ಪಕ್ಷದವರು ತಂದಿದ್ದ ಅವಿಶ್ವಾಸ ನೊಡನೆ ವಿದ್ಯುಕ್ತ ಹೋ ಯಿತು

★

ನವದೆಹಲಿ— ರೈಲೇ ನಾಕರವಾನೆ ಯಾವ ತುಟ್ಟಿಭತ್ಯ ಹೆಚ್ಚಿಸಿದ್ದನ್ನು ಸರಿ ತೂಗಲು 20 ಕೋಟಿ ರೂಗಳ ಒದಗಿಸಿ ಕೊಳ್ಳುವುದಕ್ಕಾಗಿ ಸ್ಥಾಯೀ ಸಂಕಗಳ ಸಾಗಾಣಿಕೆ ದರ ಹೆಚ್ಚಿಸ ಬೇಕೆ ಪಾರ್ಲಿಮೆಂಟಿನಲ್ಲಿ ನುಂಡಿಸಿದ ಬಜೆ ಟೆ ಸಾಲಿನಲ್ಲಿ ಯೋಜಿಸಲಾಗಿದೆ

★

ಪಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ
ತಾಲೂಕಾಸ್ಥಾನಕ್ಕೆ, ಜ್ಯೋತಿರ್ವಿದ್ವಸ್ಥಾನ
ಸಾದರಸ್ವೀಕೃತ ಜೋಯಿಸರಾಯರಿಂದ ಸ್ಥಿ
ತಿ ಶನಿವಾರ ಪಂಚಮಿ ಚಿತ್ತಾ

ಗುಂಡಿನ ಹೊಡೆತ

ಹೈದರಾಬಾದು— ಹಿಂದೀ ವಿರುದ್ಧ ಪ್ರದರ್ಶನಕಾರರ ಭೀಕರ ಗುಂಡಿನ ಮೇ ಪೋಲೀಸು ನಿಸ್ಸ ಗುಂಡು ಹಾರಿಸಲು 3 ಮಂದಿ ಸತ್ತರು.

★

ಸ್ವತಂತ್ರವಾಯಿತು

ಬಾಥರ್ಸ್ಟ್— 122 ವರ್ಷಗಳಿಂದ ಬ್ರಿಟೀಷು ಸಾಮ್ರಾಜ್ಯವಾಗಿದ್ದ ಪಶ್ಚಿಮ ಆಫ್ರಿಕಾ ರಾಜ್ಯ ಗಾಂಬಿಯಾ ನಿನ್ನೆ ಸ್ವತಂತ್ರವಾಯಿತು : 121 ತೋವುಗಳು ಹಾರಿಸಲಾಯಿತು

★

ಬೆಲೆ ಇಳಿದಿದೆ

ನವದೆಹಲಿ— ಹಲವು ಅಗತ್ಯ ವದಾ ರ್ಥಗಳ ಬೆಲೆ ಕಡಿಮೆಯಾಗಿ ನಿನ್ನೆ ಲೋಕ ಸಭೆಯಲ್ಲಿ ಸಂತ್ರಿ ಭಾಗವರು ಹೇಳಿ ದರು

★

ಸಂಹಾರದ ಮಾತು

ಕಾಂಜಾಕಾಂ— ನಮ್ಮ ದೇಶಕ್ಕೆ ಒಂ ದು ಸಂಸ್ಕೃತಿ, ಒಂದು ರಾ ಜ್ಯ ೬ ಗ ಇಂದು ಧ್ವಜವಿದ್ದರೂ ಒಂದು ಸಾರ್ವಜ ನಿಕ ಭಾಷೆಯನ್ನು ಹೊಂದಬೇಕಾಗಿದೆ ಎಂದು ಸಹಕಾರ ಮಂತ್ರಿ ಶ್ರೀ ರಾಮ ಕೃಷ್ಣ ಹೆಗ್ಗಡೆ ಹೇಳಿದರು

★

ಚಂಕಾನಾಣಿ— ಜೋಳೂರು ಹತ್ತಿ ರ ಭೆತ್ತ ತುಂಬಿದ ಲಾರಿ ಉರುಳಿ ಅಲ್ಲೇ ನಾಲ್ಕು ಮಂದಿಯನ್ನು ಅಸ್ಪತ್ರೆಯಲ್ಲಿ ಒ ಬ್ಬನೂ ಸತ್ತರು

ಜೆಕ್ಕಳಳ್ಳಾಪುರ— ಜಿಲ್ಲಾ ಎಸ್ ಎಸ್ ಎ ಸ್ ವಾರ್ಷಿಕೋತ್ಸವವು ಭಾನುವಾರ ಸೇ ವೆಯೇರಿತು : ಸ್ವಯಂಸೇವಕರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಜೇಹರಾಬಾದ್— ಅಸ್ಸಾಮಿನ ಲು ಖ್ಯಾದಲ್ಲಿ ಎಣ್ಣೆ ಇರುವದು ಪತ್ತೆಯಾ ಗಿದೆ

ಬಾರತಕ್ಕೆ 5550000 ಬುಷೆಲ್ ಆಸ್ಟೇಲಿಯಾ ಗೋಧಿ

ಕ್ಯಾನ್ಬೆರಾದಿಂದ ಬಂದಿರುವ ವಾರ್ತೆ ಪ್ರಕಾರ ಆಸ್ಟ್ರೇಲಿಯಾವು ತಕ್ಷಣ ಭಾರತಕ್ಕೆ 55 ಲಕ್ಷದ 50 ಸಾವಿರ ಬು ಷಲು ಗೋಧಿಯನ್ನು ದಾನವಾ ಮಾಡಿರು ವುದಾಗಿ ಪ್ರಧಾನಿ ಸರ್ ರಾಬರ್ಟ್ ಮೆ ನ್ಜಿಸ್ರು ಹೇಳಿದರು ಈ ಗೋಧಿಗೆ 32 ಲಕ್ಷ ಪೌಂಡುಗಳಾಗುವುವು

ಹಿಂದಿಯನ್ನು ಅಧಿಕೃತ ಭಾಷೆ ಗಿ ಹೇರುವುದನ್ನು ಪ್ರತಿಭಟಿಸಿ ತಿರುವೇರ ದ್ರಂ, ಕೊಟ್ಟಾಯಂ, ಎರ್ನಾಕುಲಂ, ಪಾಲ್ಘಾಟು, ಕಲ್ಲಿಕೋಟೆ, ಕ್ವಿಲಾನು, ಅಲಪ್ಪಿಗಳಲ್ಲಿ ಇಂದ ಹೆಚ್ಚು ಕಡೆ ಸಂ ಪೂರ್ಣ ಹರತಾಳ ನಡೆಯಿತು

ನೆಹರೂರವರು ಹಿಂದಿಯೇತರ ಭಾಷೆ ರಾಜ್ಯಗಳವರಿಗೆ ಕೊಟ್ಟಿರುವ ಧರವಸೆ ಯನ್ನು ಸರ್ಕಾರವು ಕಪ್ಪದೇ ನಡೆಸುವು ದೆಂದು ಕೇಂದ್ರ ವಿದ್ಯಾಮಂತ್ರಿ ಶ್ರೀ ಚಾಗಲಾ ತಿಳಿಸಿದರು

ಮೇ 15 ರಂದು ಪ್ರಧಾನಿ ಶಾಸ್ತ್ರಿ ಗಳು ಅಮೆರಿಕಕ್ಕೆ ಭೇಟಿಕೊಡುವ ಸಂಭವ ವಿದೆ

ಹಿಂದಿ ವಿಷಯದಲ್ಲಿ ನೆಹರೂ ಭರವಸೆಯಂತೆ ನಡೆಯಬೇಕೆಂದು ಬೆಂಗ ಳೂರು ಕಾರ್ಪೊರೇಷನ್ ಕಛೇರಿಯ ಮುಂ ದಿನ ಇದನ್ನು ವಿರೋಧಿಸಿದ ಶ್ರೀ ವಿಠಲ ನಾಗರಾಜರು ಸಭಾ ತ್ಯಾಗ ನಡೆ ಸಿದರು

ಭಂಗಿಗಳ ಮುಷ್ಕರ

ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ನಿನ 500 ಭಂಗಿಗಳ ಮುಷ್ಕರ 5 ನೇ ದಿನದಲ್ಲಿ ನಡೆಯುತ್ತಿದೆ — ಹೆಚ್ಚಿನ ಬಾಡಿ ಸಂಬಳದ ಬಾಕಿ ಲಾವತಿಯಲ್ಲಿನ ತಡವೆ ಮುಷ್ಕರಕ್ಕೆ ಕಾರಣವೆಂದು ಹೇಳಲಾಗಿ ದೆ — ಕೆಲಸಕ್ಕೆ ಬಾರದವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಕಾರ್ಪೊರೇಷನ್ ಕಮೀಷನರ್ ಎಚ್ಚರಿಸಿದ್ದಾರೆ

★

ಪತ್ರಿಕಾ ಶಾಸನವನ್ನು ಜಮ್ಮು ಕಾ ಶ್ಮೀರಕ್ಕೆ ಅದ್ದುಯಿಸುವಂತೆ ರಾಜ್ಯಸಭೆ ಯಲ್ಲಿ ಮನವಿಯಾಗಿದೆ

ಪಾಟಿಯಾಲಾ— 3 ದಿನಗಳ ರಾ ಷ್ಟ್ರೀಯ ಸೈಕಲ್ ಸ್ಪರ್ಧೆಯು ಶು ॥ 26 ರಂದು ಪಂಜಾಬು ಗೌರ್ನರು ಉದ್ಘಾ ಟಿಸಿದರು

ಗುಬ್ಬಿ— ಒಂದು ಬಸ್ಸು ಅಳ್ಳೇರಹಳ್ಳಿ ಒಟ್ಟು ನಡು 24ರಂದು ಸಾಯುಗೊಂಡಿತು

ಭಾರತದ ಪ್ರತಿ ಮನೆಯೂ ಸದ್ವಿದ್ಯಾ ಶಾಲೆಗಳಾಗಬೇಕು

ಹೆಣ್ಣು ತಾಯಿಯೇ ಪ್ರಪ್ರಥಮ ವಿದ್ಯಾಗುರುವಾಗಲಿ ; ಅಟದಾಟಗಳು ನೀತಿಪ್ರಬೋಧಕಗಳಾಗಿಯೂ, ಶಬ್ದ, ನಿಯಮ, ಅಭ್ಯಾಸಶೀಲತೆ, ಮನಸ್ಸಾ ಪಿ ಶ್ರೀ ಗುರು ದೈವ ಭಕ್ತಿ,, ದೇಶಪ್ರೇಮಗಳಿಂದ ಕೂಡಿರಬೇಕು

ಮಕ್ಕಳು ತಾಯಿಯು ಗುಣವಸ್ಥೇ ಪ್ರಾಪ್ತವಾಗಿ ಕಲಿಯುವುದರಿಂದ ತನ್ನ ಮಕ್ಕಳನು ತಾನೇ ಪಾಲಿಸಬೇಕಲ್ಲದೆ ದಾದಿಯರ ಪಾಲಿಗೆ ವಹಿಸಿಬಿಡಬಾರದು : ಮಕ್ಕಳ ಪುರೋಭಿವೃದ್ಧಿ ಚಿಂತನೆಯು ತಾಯಿಗಿಂತಪಷ್ಟು ಬೇರೆಯಾರಿಗೂ ಇರದು : ಹೆಣ್ಣಾಕಾಯಿ ಯಲ್ಲಿ ಸೌಜನ್ಯ ಸಹನಶೀಲತೆ ಸದ್ವರ್ತನೆ ಶಾಂತಿಸಾಲನೆಗಳ ತುಂಬಿತುಳುಕಬೇಕು : ಅಂತಃ ತಾಯಿ ಸಾತಿದ ಮಗುವು ಮುಂದೆ ಭಾವೀ ಪ್ರಜೆಯಾದಾಗ್ಯೂ ದೇಶಾಭಿಮಾನ ಭಾಷಾಭಿಮಾನಗಿಂತ ಮತಾಭಿಮಾನದಿಂದ ದೇಶದ ಕೀರ್ತಿಯನ್ನು ಳಿಸಲು ದುಡಿಯುವುದು : ಪಾಶ್ಚಾತ್ಯ ವೈಜನದ ಜೊತೆಗೆ ತಾ ಯಿ ಯಾ ಮಕ್ಕಳಲ್ಲಿ ಧೈರ್ಯ ಸಹನೆ ಶೌಚ ಶಾಂತಿ ಗುಣಗಳು ಹುಟ್ಟುವಂತಹ ನೀತಿ ಕಥೆಗಳನ್ನು ಬೋಧಿಸಬೇಕು : ದೈವಾಂಶವು ಮಕ್ಕಳಲ್ಲಿ ದೃಢವಾಗುವಂತೆಯೂ, ಆರೋಗ್ಯ ದೃಢಕಾಯವಾಗುವಂತೆಯೂ, ಶುಚಿ ರುಚಿ ಪೌಷ್ಟಿಕಾಹಾರಾದಿ ಸತ್ವಾಹಾರಗಳನ್ನು ಕೊಡುತ್ತಿರಬೇಕು:

ಇಷ್ಟು ತಾಯಿಯ ಮೇಲೆ ದಿವ್ಯ ಭಾರವಾದ್ದರಿಂದ ದೇಶದ ವಿಧಿಗೆ ಸ್ತ್ರೀಯರ ಮೇಲೆ ಇದ್ದ ಹೆಚ್ಚು ಹೊರೆಯಾಗಿದೆ ; ಹಾಗಲ್ಲದೆ ಮಕ್ಕಳ ಕಡೆ ಉದಾಸೀನ ಮಾಡಿದರೆ, ನೆರೆಹೊರೆಯ ಸಹವಾಸ ಸ್ಪರ್ಧಾ ದೇಶಗಳಿಂದ ದೊಡ್ಡ ರೋಗದೇಳೆ, ಅಂಜುಬುರುಕರೂ, ಹೇಡಿಗಳೂ ದುರಾದೃಷ್ಟವಂತ ಸೋಮಾರಿಗಳೂ ಆಗುತ್ತಾರೆ ; ಬಹುಮಂದಿ ಇಂತಹ ಮಕ್ಕಳನ್ನು ನೋಡಿದ ಭಾರತಮಾತೆಯು ತನ್ನ ಹಿಂದಿನ ಮಕ್ಕಳನ್ನು ನೆನಸಿಕೊಂಡು ಕಣ್ಣೀರಿಡುವಳು.

ಆದ್ದರಿಂದ ಪ್ರತಿಯೊಬ್ಬ ಸ್ತ್ರೀಯೂ ಸ್ತ್ರೀಧರ್ಮವಾಚಲನೆಯ ಸದ್ವಿದ್ಯಾ ಧಾರಕರಾಗಲು ರಾಜಶಾಸನವಾಗಬೇಕು ; ಆಂದೇ ನಮ್ಮ ದೇಶ ಶಾಂತಿಯ ಶ್ರೀಮಂತರಾಗುವುದು.

ಬಿ ಜೆ ಶಾಸ್ತ್ರಿ
ವಿದ್ಯಾರಣ್ಯಪುರ, ಮೈಸೂರು

Help The ' Gorakshana '



" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶ್ಚಾಣದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪತ್ರಿಕಾ ಮಾಸಪತ್ರಿಕೆ.

ಶ್ರೀ ದತ್ತಾತ್ರೇಯ ಜಗದ್ಗುರು ಮಹಾಸಂಸ್ಥಾನಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ವಾರ್ಷಿಕ ಚಂದಾ ೫೫ ಬೈಸೆ ; ಗೋರಕ್ಷಣ ಕ್ಕೆ ಲೇಖನಗಳನ್ನು ಪ್ರೋತ್ಸಾಹಕ ಧನವನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು ೬

ವುಡ್‌ಲ್ಯಾಂಡ್ಸ್ ಜಯಸ್ಮದ-2 ನೇ ವಾರ

— ಅಮೋಘ ಹಾಸ್ಯಮಯ ಕೌಟುಂಬಿಕ ಹಿಂದಿ ಚಿತ್ರ —

ಹರ್ಕ್ಯೂಲೆಸ್ HERCULES

ನಟವರ್ಗ— ದಾರಾಸಿಂಗ್, ನಿಶಿ, ಹೆಲೆನ್, ಮುಮ್ತಾಜ್, ಮ್ಯಾಸ್, ಮಾಯಾತಿ

ಸಾಹಸಮಯ ರೋಮಾಂಚಕ ಅದ್ಭುತ ಚಿತ್ರ : ಮೈಕ್ ಸಂಗೀತ ವೈಭವದಿಂದ

[ದಿನವೆಹ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

ಮನಮೋಹಕ ಕೌಟುಂಬಿಕ ಚಿತ್ರ [ದಿನ 3 ಆಟಗಳು]

ಆ ಮ್ಮಾ ಎಂ ಗೆ ?

ನಟನಟಿಯರ— ಮುಮ್ತಾಜ್‌ಅಲಿ, ಪ್ರಿಯದರ್ಶಿನಿ, ಚಂದ್ರಕಾಂತ, ಮನೋರ್ ಬೇಡಿ ಶಕೀಲ

ರಣಜಿತ್‌ನಲ್ಲಿ ಜನವರಿಯ 3 ನೇ ವಾರ

.... ಪ್ರತಿ ಸುಂದರವೂ ನೋಡಿ ಆನಂದಿಸಬಕ್ಕ ಅತ್ಯಮೋಘ ಕನ್ನಡ ಚಿತ್ರ ....

— ಕರ್ನಾಟಕ ಫಿಲಂಸ್ ಅರ್ಪಿಸುವ, ವಿವಿಧ ಭಾರತಿಯವರ —

ಬೆರತ ಜೀವ [ಕನ್ನಡ]

ತಾರಾಗಣ— ಕಲ್ಯಾಣ ಕುಮಾರ್, ಅಶ್ವತ್ಥ್, ರತ್ನಮಾಲಾ ಚಂದ್ರಶೇಖರ್, ನರಸಿಂಹರಾಜು, ಶಿವರಾಜ್, ಸರೋಜಾದೇವಿ, ಲಕ್ಷ್ಮೀದೇವಿ, ಜಯಶ್ರೀ

ನಿರ್ಮಾಪಕರು— ಕು. ರಾ. ಸೀತಾರಾಮು ಶಾಸ್ತ್ರಿ

4 ಟ್ರಾಕ್‌ಗಳು ಕಾಂಪ್ಲಿಮೆಂಟರಿವರ್ತ್ ಫ್ರೀ ಪಾಸುಗಳನ್ನು ಮನ್ನಾ ಮಾಡಿರುತ್ತೆ.

ಪ್ರತಿ ದಿನ 3 ಪ್ರದರ್ಶನಗಳು — ಕರ್ನಾಟಕ ಫಿಲಂಸ್ ಹಂಚಿಕೆ

ಅಶೋಕಾ ಏಜೆನ್ಸೀಸ್

ಬ್ಯಾಂಕರ್ಸ್ ಬಿಲ್ಡಿಂಗ್ಸ್, ಮೈಸೂರು

ಸಮಸ್ತ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ಎಲ್ಲಾ ಬಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Lakshminarasimha Press

Quality Printing — Neat Binding

Sivarampet, Mysore

ಗೋರಕ್ಷಣೆ ಪತ್ರಿಕೆಯ ಜಾಹೀರಾತುಗಳು ಹೆಚ್ಚಿನ ಲಾಭಕ್ಕಾಗಿ ಪಡೆಯಿರಿ

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore